Regd No M. 1299

ಸತ್ಯವಾದಿ

ವಾರಪತ್ರಿಕೆ

ಸ್ಥಳಕ್ಕೆ
ವರ್ಷಕ್ಕೆ ರೂ. 1—0—0

(ಮೈಸೂರು ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಪ್ರತಿಷ್ಠಿತಪಾದುದು)

ಪ್ರತಿ ಬುಧವಾರ ಪ್ರಕಟಿಸಲ್ಪಡುವದು

ಪರಸ್ಥಳಕ್ಕೆ
ವರ್ಷಕ್ಕೆ ರೂ. 1—10—0
(ಮನಿಯೂರ್ಡರ್ ಮೂಲಕ)

ಸಂಪುಟ 17] ಮೈಸೂರು, ಬುಧವಾರ 2 ನೆ ಜನವರಿ 1934 [ಸಂಚಿಕೆ 13

ಮೈಸೂರು ಎನ್. ಎನ್. ಪಂಡಿತರ

ಬಿಳೀಹಲ್ಲುಪುಡಿ! ಕರೀಹಲ್ಲುಪುಡಿ! ಮೈಸೂರು ಟೂತ್‌ಪೇಸ್ಟ್!

ಬಿಳೀಹಲ್ಲುಪುಡಿ—ಇದರಲ್ಲಿ ಸಿಹಿ ಪುಡಿಯು ಸುವಾಸನೆ ಸುರುಚಿ ಇವುಗಳಿಂದ ಕೂಡಿ ಹಲ್ಲುಗಳನ್ನು ಶುಭ್ರವಾಗಿಡುತ್ತದೆ. ಉಪ್ಪಿನ ಪುಡಿಯು ರುಚಿಯೂಗಿಯೂ, ಆರೋಗ್ಯಕರವಾಗಿಯೂ ಇದೆ. ಪೊಟ್ಟಣ 1 ಕ್ಕೆ (ಸಿಹಿ, ಉಪ್ಪು) 9 ಪೈ ; ಡಬ್ಬಿ 1 ಕ್ಕೆ (ಸಿಹಿ ಮತ್ತು ಉಪ್ಪು) 1 ಆಣೆ.

ಕರೀ ಹಲ್ಲುಪುಡಿ—ಇದನ್ನು ನಿತ್ಯವೂ ಉಪಯೋಗಿಸುವುದರಿಂದ, ಹಲ್ಲುಗಳ ಎಲ್ಲಾ ಕಾಯಿಲೆಗಳನ್ನೂ ಗುಣಮಾಡಿ ಪುನಃ ತೇಗಬಾರದಂತೆ ಅಡ್ಡಿಪಡಿಸುತ್ತದೆ. ಹಲ್ಲುಗಳ ಕೊಳೆಯನ್ನು ತೆಗೆದು ಬೆಳ್ಳಗೆ ಇಡುವುದರಲ್ಲಿ ಅದ್ವಿತೀಯವಾದ್ದು. ಟಿ 1 ಕ್ಕೆ 2 ಆಣೆ.

ಮೈಸೂರು ಟೂತ್‌ಪೇಸ್ಟ್—ಸೀಮೆಯಿಂದ ಬರುವ ಟೂತ್‌ಪೇಸ್ಟ್‌ಗಳಿಗಿಂತ ಗುಣ ಮುಂತಾದುವುಗಳಲ್ಲಿ ಕಡಮೆಯಾಗಿಲ್ಲ. ನಯ, ಹೊಳಪು, ಸುವಾಸನೆ, ರುಚಿ ಇವುಗಳಿಂದ ಕೂಡಿ ವಸಡುಗಳಿಗೆ ಬಲವನ್ನೂ, ಹಲ್ಲುಗಳಿಗೆ ಥಳಥಳ್ಳನವನ್ನೂ ಉಂಟುಮಾಡುತ್ತದೆ. ಇದರ ಉಪಯೋಗದಿಂದ ಹಲ್ಲುಗಳನ್ನು ಹಾಳುಮಾಡತಕ್ಕ ಟಾರ್--ಟರ್ (ದಂತ ತಕ್ಕರ) ಅಂಟು, ಹುಳು, ಮುಂತಾದವುನಾಶವಾಗುತ್ತವೆ. ಇದರಲ್ಲಿ ಎಲ್ಲಾ ಶಾಸ್ತ್ರೀಯ ಪದಾರ್ಥಗಳೇ ಸೇರಿರುತ್ತದೆ. ಇದನ್ನು ಬ್ರಷ್ ಅಥವಾ ಬೆರಳಿನಿಂದ ಉಪಯೋಗಿಸಬಹುದು. ಒಂದಾವರ್ತಿಪರಿಕ್ಷಿಸಿ ನೋಡಬೇಕಾದ್ದು. ಟಿ 1 ಕ್ಕೆ 5 ಆಣೆ.

[ಷರಾ:—ಮೇಲಿನ ಪುಡಿಗಳಲ್ಲಿ ಬತ್ತದಹೊಟ್ಟಿನಬೂದಿ, ಸೀಮೆಸುಣ್ಣ ಇವು ಸೇರಿಲ್ಲ. ನಕಲು ಮೂಲುಗಳಿಗೆ ಮೋಸಹೋಗಬೇಡಿ. ವ್ಯಾಪಾರಿಗಳಿಗೆ ಹೆಚ್ಚು ಕಮಿಷನ್ ಕೊಡಲ್ಪಡುವುದು. ನಮ್ಮಲ್ಲಿ ಎಲ್ಲಾ ವಿಧವಾದ ಆಯುರ್ವೇದೀಯ ಮಹೌಷಧಗಳೂ ತಯಾರಾಗುತ್ತವೆ. ಕ್ಯಾಟಲಾಗಿಗೆ ಬರೆಯಿರಿ]

ಪ್ರೊಪ್ರೈಟರ್ಸ್
ಎಸ್. ಎನ್. ಪಂಡಿತ್ ಅಂಡ್ ಸನ್ಸ್
Manufg Chemists Druggists & Physicians

ಮಳವಳ್ಳಿ ಏಜೆಂಟರು :
ಮಿ| ಜಿ. ಎಸ್. ವೆಂಕಟರಾವ್

ಅಡ್ರೆಸ್
ದಿ ಮೈಸೂರು ಆಯುರ್ವೇದಿಕ್ ಫಾರ್ಮೆಸಿ
೯೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

Mysore Railways

NOTICE

Re Cheap 3 rd class return tickets between Krishnarajnagar and Mysore.

With effect from 1 st January 1935, single day 3 rd class Return Tickets will be issued between Mysore and Krishnarajnagar at the fares shown against them :—

1) Krishnarajanagar to Mysore (Return) 0--8--3
2) Mysore to Krishnarajanagar (Return) 0--8--3

These tickets are available by all trains and return jousney should be completed same day.

For further particulars, apply to the Station Masters concerned or to the undersigned.

Traffic Manager's Office
M y s o r e
Dated, 14 th Dec. 1934

H. D. SINCLAIR
Traffic Manager

Government of Mysore

ನೋಟೀಸು

ಮೈಸೂರು ಸರ್ಕಾರದ ಕಂಟ್ರೋಲರವರು1938 ನೇ ಇಸವಿಯ ಬಾಬತು ಶೇಕಡಾ ಐದೂ ವರೆಯಂತೆ ಬಡ್ಡಿಯುಳ್ಳ, ಮತ್ತು 1940 ನೇ ಇಸವಿಯ ಬಾಬ್ತು ಶೇಕಡಾ ಆರೂಕಾಲರಂತೆ ಬಡ್ಡಿಯುಳ್ಳ, ಮತ್ತು 1941--51 ರ ಬಾಬತು ಶೇಕಡಾ ಆರೂವರೆಯಂತೆ ಬಡ್ಡಿಯುಳ್ಳ ಮೈಸೂರು ಸರ್ಕಾರದ ಸಾಲಪತ್ರಗಳನ್ನು ಸ್ವೀಕರಿಸಿ, ಅವಕ್ಕೆ ಪ್ರತಿಯಾಗಿ ಶೇಕಡ ನಾಲ್ಕರಂತೆ ಬಡ್ಡಿಯುಳ್ಳ ವರಮಾನದ ತೆರಿಗೆಯನ್ನು ಕೊಡಬೇಕಾದ ಆವಶ್ಯಕತೆಯಿಲ್ಲದ ವಿನಾಯಿತಿಯುಳ್ಳ 1953--63 ರ ಬಾಬತು ಮೈಸೂರು ಸರ್ಕಾರದ ಸಾಲಪತ್ರಗಳನ್ನು ಕೊಡುತ್ತಾರೆ. ಈ ಸಾಲಪತ್ರಗಳ ಜೊತೆಗೆ ಒಂದು ನಗದು ಬೋನಸ್ಸನ್ನೂ ಮತ್ತು ಬಡ್ಡಿಯನ್ನೂ ಕೊಡಲಾಗುವುದು. ಅಂಗೀಕೃತರಾದ ಬ್ರೋಕರುಗಳಿಗೂ ಮತ್ತು ಬ್ಯಾಂಕುಗಳವರಿಗೂ, ಅವರ ಮೂಲಕ ಬಂದ ಮನವಿಗಳ ಸಂಬಂಧದ ಸಾದಪತ್ರಗಳ ಮೊಬಲಗುಗಳಮೇಲೆಶೇಕಡ ಒಂದು ಆಣೆ ದರದಲ್ಲಿ ದಳ್ಳಾಳಿಯನ್ನು ಕೊಡಲಾಗುವುದು. ಈ ವಿಷಯದಲ್ಲಿನ ಇತರಸಂಗತಿಗಳೇನಾದರೂ ತಿಳಿದುಕೊಳ್ಳಬೇಕಾಗಿದ್ದರೆ ಅವುಗಳನ್ನು " ಬೆಂಗಳೂರಿಗೆ, ಮೈಸೂರು ಸರಕಾರದ ಕಂಟ್ರೋಲರವರ ಸಮುಕ್ಷಮಕ್ಕೆ " ಎಂಬ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಎ. ಎಸ್. ರಾಘವಾಚಾರ್
ಮೈಸೂರು ಸರ್ಕಾರದ ಕಂಟ್ರೋಲರ್.

Edited, Printed & Published by M. S. Krishna Rao, at the Satyavadi Press, Satyavadi Buildings, Chamaraj Agrahar, Mysore

ಸತ್ಯವಾದಿ

ನ್ಯಾಯವಿಧಾಯಕ ಸಭೆಯಲ್ಲಿ ಖಾಸಗೀ ಮಸೂದೆಗಳು.

—

ನ್ಯಾಯವಿಧಾಯಕ ಸಭೆಯ ಅಧಿವೇಶನದಲ್ಲಿ ಖಾಸಗೀ ಸದಸ್ಯರಿಂದ ತಥಲ್ಪಟ್ಟ ಬಾಲ್ಯವಿವಾಹ ನಿರೋಧದ ಮಸೂದೆ ಮತ್ತು ವ್ಯಭಿಚಾರ ವೃತ್ತಿ ನಿರೋಧದ ಮಸೂದೆ, ಈ ಎರಡು ಮಸೂದೆಗಳೂ ಮುಂದಿನ ಅಧಿವೇಶನದಲ್ಲಿ ಚರ್ಚಿಸುವದಕ್ಕಾಗಿ ಬಾಕಿ ಇಡಲಾದವು. ಸಾಮಾನ್ಯವಾಗಿ, ನ್ಯಾಯವಿಧಾಯಕ ಸಭೆಯಲ್ಲಿ ತರಬೇಕಾದ ಮಸೂದೆಗಳೆಂದರೆ, ರಾಜಕೆಯ, ಆರ್ಥಿಕ, ನೈತಿಕ ವಿಷಯಗಳಿಗೆ ಸಂಬಂಧಪಟ್ಟವಾಗಿರಬೇಕು. ಅಂತಹ ವಿಷಯಗಳಲ್ಲಿ ಪ್ರಜಾಸಾಮಾನ್ಯಕ್ಕೆ ಸೌಕರ್ಯವನ್ನುಂಟುಮಾಡುವ ಕಾನೂನುಗಳನ್ನು ತಯಾರಿಸಲು ಸರ್ಕಾದವರಿಗೆ ಸೂಚನೆ ಕೊಡುವದಕ್ಕಾಗಿಯೇ ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನು ಆರಿಸಿ ಕೊಡುವುದಾಗಿದೆ. ಮತ್ತು ನ್ಯಾಯವಿಧಾಯಕ ಸಭೆಯು ಇರುವದೂ ಅದಕ್ಕಾಗಿಯೇ. ಧಾರ್ಮಿಕ ವಿಷಯಗಳಲ್ಲಿ ತಿದ್ದುಪಡಿಯನ್ನು ಮಾಡುವದು ನ್ಯಾಯವಿಧಾಯಕ ಸಭೆಯ ಕೆಲಸವಲ್ಲ. ಮತ್ತು ಪ್ರಜೆಗಳು, ಧಾರ್ಮಿಕ ಆಚರಣೆಗಳಲ್ಲಿ ಬದಲಾವಣೆಮಾಡುವ ಕಾನೂನುಗಳನ್ನು ತಯಾರಿಸಲು ಸೂಚಿಸುವ ಉದ್ದೇಶದಿಂದ ಪ್ರತಿನಿಧಿಗಳನ್ನು ಚುನಾಯಿಸಿದ್ದೂ ಅಲ್ಲ. ಅಂತಹ ವಿಷಯಗಳನ್ನು ಚರ್ಚಿಸುವ ಅಧಿಕಾರವೂ ಆ ಪ್ರತಿನಿಧಿಗಳಿಗೆ ಇರುವದೂ ಇಲ್ಲ. ಧಾರ್ಮಿಕ ವಿಷಯಗಳಲ್ಲಿ ವಿಚಾರಣಾಕರ್ತರಾದ ಗುರುಪೀಠಗಳಿವೆ. ಆವರೇ ಅದನ್ನು ತಮ್ಮತಮ್ಮ ಶಾಸ್ತ್ರಗಳಿಗೆ ಅವಿರುದ್ಧವಾಗಿ ತಮ್ಮ ಅನುಯಾಯಿಗಳಲ್ಲಿ ಪ್ರಚಾರಮಾಡುತ್ತಾರೆ.

ಆದರೂ ತಮ್ಮ ಅಧಿಕಾರಕ್ಕೆ ಹೊರಗಾದ ವಿವಾಹಾದಿ ವಿಷಯಗಳಲ್ಲಿ ಕಾಲನಿರ್ಬಂಧವನ್ನು ಮಾಡುವಂಥಾ ಮಸೂದೆಗಳನ್ನು ನಮ್ಮ ಪ್ರತಿನಿಧಿಗಳಿಸಿಸಿಕೊಂಡೇ ನ್ಯಾಯವಿಧಾಯಕ ಸಭೆಯಲ್ಲಿ ತಂದು, ಅದಕ್ಕಾಗಿ ಒಂದು ಕಾನೂನನ್ನು ರಚಿಸಲು ಸಾಹಸ ಪಡುವದು ಬಹು ವಿಷಾದಕರವಾದುದು. ಸರ್ಕಾರದವರಾದರೂ ಪ್ರಜೆಗಳ ಧಾರ್ಮಿಕ ಆಚರಣೆಗೆ ಸಂಬಂಧಪಟ್ಟ ಇಂತಹ ವಿಷಯಗಳನ್ನು ನ್ಯಾಯವಿಧಾಯಕ ಸಭೆಯಲ್ಲಿ ಚರ್ಚಿಸಲು ಸಮ್ಮತಿಸುವದು ನ್ಯಾಯವಲ್ಲವೆಂದು ಹೇಳಲಾಗುವದಿಲ್ಲ. ಆಂತು, ಈ ಮಸೂದೆಯು ಮುಂದಿನ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆಗೆ ಬಂದು ಕಾನೂನಾಗದಂತೆ ಯತ್ನಗಳನ್ನು ಮಾಡುವದೂ ಧರ್ಮಾಭಿಮಾನಿಗಳ ಕರ್ತವ್ಯವಾಗಿರುತ್ತದೆ. ಈ ಮಸೂದೆಗೆ ವಿರೋಧವಾದ ಚಳುವಳಿಯನ್ನು ಈಗಿನಿಂದಲೇ ಪ್ರತಿಯೊಂದು ತಾಲ್ಲೂಕು ಹಳ್ಳಿಗಳಲ್ಲಿಯೂ ಪ್ರಾರಂಭಿಸುವದು ಅಗತ್ಯವಿರುತ್ತದೆ.

ವ್ಯಭಿಚಾರವೃತ್ತಿ ನಿರೋಧದ ಮಸೂದೆ ಯಾದರೂ ಅಷ್ಟು ಸಮಂಜನವೆಂದು ಹೇಳಲಾಗುವುದಿಲ್ಲ. ವ್ಯಭಿಚಾರ ವೃತ್ತಿಯು ಇರಲೇಬೇಕೆಂದು ವಾದಿಸುವವರು ನಾವಲ್ಲವಾದರೂ, ಅದನ್ನು ತಡೆಯುವದಕ್ಕಾಗಿ ಕಾನೂನನ್ನು ಮಾಡುವದು ಅಷ್ಟೊಂದು ಒಳ್ಳೆಯದೆಂದು ಹೇಳಲಾಗುವುದಿಲ್ಲ. ಸಮಾಜದಲ್ಲಿಯೇ ಜನಗಳಿಗೆ ತಕ್ಕ ಎಚ್ಚರಿಕೆಯನ್ನುಂಟುಮಾಡಿ ಪ್ರಚಾರವನ್ನು ನಡೆಸಿ, ಕ್ರಮೇಣ ಅದನ್ನು ಹೋಗಲಾಡಿಸಲು ಯತ್ನಿಸಬೇಕಲ್ಲದೇ ಕಾನೂನಿನಿಂದ ವ್ಯಭಿಚಾರ ವೃತ್ತಿಯನ್ನು ತಡೆಯುವದು ಸಾಧ್ಯವೆಂದು ತಿಳಿಯ ಕೂಡದು. ಅಂತಹ ಕಾನೂನನ್ನು ರಚಿಸುವುದರಿಂದ ವ್ಯಭಿಚಾರ ವೃತ್ತಿಯು ತಡೆಯುವುದರ ಬದಲು ಮತ್ತಷ್ಟು ಭಯಂಕರ ರೂಪವನ್ನು ತಾಳಿ, ಜನಗಳ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಸೌಜನ್ಯವನ್ನೇ ನಿರ್ಮೂಲ ಮಾಡುವರೆಂದು ದೃಢವಾಗಿ ಹೇಳಬಹುದು. ಯಾವದಾದರೊಂದು ಕಾನೂನು ಜಾರಿಯೆತ್ತಿತೆಂದರೆ, ಅದರ ಶಿಸ್ತನ್ನು ರಕ್ಷಿಸುವದಕ್ಕೆ ಪೋಲೀಸಿನವರಿಗೆ ಒಂದು ಕೈ ಇದ್ದೇ ಇರುತ್ತದೆ. ಲಂಚವನ್ನು ತಿನ್ನುವುದೂ ಸುಳ್ಳು ಕೇಸನ್ನು ಹಾಕುವದೂ ತಮ್ಮ ಡ್ಯೂಟಿಯಲ್ಲಿ ಒಂದೆಂದು ತಿಳಿದ ಕೆಲಮಂದಿ ಪೋಲೀಸಿನವರಾದರೂ ಇರುತ್ತಾರೆಂದ ಮೇತೆ, ನ್ಯಾಯದ ರೂಪವು ಯಾವ ರೀತಿಯನ್ನು ಹೊಂದಬಹುದೋ ಎಂಬುವುದನ್ನು ಸುಲಭವಾಗಿ ಊಹಿಸಬಹುದು. ಮೋಟಾರು ಬಸ್ಸುಗಳ ವಿಷಯದಲ್ಲಿ ಪೋಲೀಸಿನವರ ವರ್ತನವನ್ನು ನೋಡಿದರೆ, ಕಾನೂನಿನಿಂದ ಜನಗಳಿಗೆ ಆಗುವ ಪ್ರಯೋಜನದ ಪರಮಾವಧಿಯು ಸ್ಪಷ್ಟವಾಗಿ ತಿಳಿದುಬರುತ್ತದೆ. ಪ್ರತಿನಿತ್ಯವೂ ದಾಖಲಾಗುತ್ತಿರುವ "ಓವರ್‌ಲೋಡು" "ರಸ್ತೆಸಂಚಾರದ ಅಡ್ಡಿ" ಇತ್ಯಾದಿ ಹೆಸರುಗಳಿಂದ ಇರುವ ಕೇಸುಗಳಲ್ಲಿ ಶೇಕಡಾ 95 ರಷ್ಟು ಸಂಪೂರ್ಣ ಸುಳ್ಳಾಗಿರುತ್ತವೆ. ಅಂಥ ಸುಳ್ಳು ಕೇಸುಗಳನ್ನೇ ವ್ಯವಹರಿಸುವದಕ್ಕೆ ತುಂಬಾ ಹಣವನ್ನು ಖರ್ಚು ಮಾಡುವದಕ್ಕೆ ಬದಲಿಗೆ ಅಲ್ಪಸ್ವಲ್ಪ ಜುಲ್ಮಾನೆಯನ್ನೇ ಕೊಟ್ಟುಬರುವದು ಉತ್ತಮವೆಂಬ ಅಭಿಪ್ರಾಯವೇ ಮೋಟಾರಿನವರಲ್ಲಿ ತಲೆದೋರಿ, ಅನೇಕರು ಜುಲ್ಮಾನೆಯನ್ನು ಅನಾವಶ್ಯಕವಾಗಿ ತೆರುತ್ತಿರುವದನ್ನು ನಾವು ಪ್ರತಿ ನಿತ್ಯವೂ ನೋಡಬಹುದಾಗಿರುತ್ತದೆ.

ಲಂಚ ಕೊಟ್ಟವರ ಮೇಲೆ ಯಾವ ತಕ್ಷೀರೂ ನಡೆಯದೇ ಇರತಕ್ಕ ಸಂದರ್ಭಗಳೂ ಇರುತ್ತವೆ. ಅಂದಮೇಲೆ, ಪರಿಸ್ಥಿತಿಯು ಈ ರೀತಿ ಇರುವಾಗ, ವ್ಯಭಿಚಾರ ನಿರೋಧದ ಕಾನೂನು ಜಾರಿಗೆ ಬಂದರೆ ಮೂಸವಂತರಾಗಿರುವ ಸ್ತ್ರೀ ಪುರುಷರ ಪಾಡು ಯಾವ ರೀತಿ ಯಾಗಬಹುದೆಂಬುದನ್ನು ಸುಲಭವಾಗಿ ಯೋಚಿಸಬಹುದಾಗಿದೆ.

ಆದರೆ ಪ್ರಜಾಮುಖಂಡರು ವ್ಯಭಿಚಾರವನ್ನು ತಡೆಯುವದಕ್ಕಾಗಿ ಬೇರೆ ಯಾವುದಾದರೂ ಉತ್ತಮವಾದ ಏರ್ಪಾಡನ್ನು ಯೋಚಿಸುವುದು ಒಳ್ಳೆಯದು.

ಶಾಮಲರಾವ್

(ಹಿಂದಿನ ವಾರದಿಂದ ಮುಂದುವರಿದುದು)

ಒಂದು ದಿನ ಶ್ಯಾಮಲರಾವು ಜೇದಿಯಲ್ಲಿಯ ಕೋಣೆಯಲ್ಲಿ ಕುಳಿತು ಹಿಂದಿನ ದಿನದ ಸಮಾಚಾರ ಪತ್ರಿಕೆಯನ್ನೋದುತ್ತಿದ್ದನು. ಇಷ್ಟರಲ್ಲಿ ಆ ದಿನದ "ಹಿಂದೂ" ಪತ್ರಿಕೆಯನ್ನು ರಾಮನಾಥರಾವು ಕೈಯಲ್ಲಿ ಹಿಡಿದುಕೊಂಡು ಬಂದು, ಮಗೂ ನಿನ್ನ ನಂಬರೇನು, ಎಂದು ಪ್ರಶ್ನಿಸಿದನು. ಶ್ಯಾಮಲರಾವು ನೆಂತರು ಹೇಳದೆಯೇ, ಫಲಿತಗಳು ಬಂದಿವೆಯೇ, ಎನ್ನುತ್ತಾ, ತಂದೆಯ ಕೈಯ್ಯಿಂದ ಆ ಪತ್ರಿಕೆಯನ್ನು ತೆಗೆದುಕೊಂಡು ತನ್ನ ನಂಬರಿಗಾಗಿ ಹುಡುಕಿದನು. ಆದರೆ ನಿಷ್ಪ್ರಯೋಜನವಾಯಿತು. ತಾನು ಪರೀಕ್ಷೆಯಲ್ಲಿ ಕೃತಾರ್ಥನಾಗದಿದ್ದದ್ದನರಿತು ಕುರ್ಚಿಯಲ್ಲಿ ಬಿದ್ದುಕೊಂಡನು.

ಕೂಡಲೇ ತಾನು ಪರೀಕ್ಷೆಯಲ್ಲಿ ಕೃತಾರ್ಥನಾಗಲಿಲ್ಲವೆಂದೂ, ಕೆಲವು ದಿನಗಳಲ್ಲಿ ಪುನಃ ಮದರಾಸಿಗೆ ಬರುವದಾಗಿಯೂ ಮನೋಹರಿಗೆ ಕಾಗದವನ್ನು ಬರೆದು ಜವಾನನ ಕೈಯಲ್ಲಿ ಪೋಸ್ಟ್ ಮಾಡಲು ಕೊಟ್ಟು ಕಳುಹಿಸಿದನು. ಎಷ್ಟೋ ಯೋಚನೆಗಳಲ್ಲಿ ಮುಳುಗಿದ್ದ ಶಾಮಲರಾವನ್ನು ರಾಮನಾಥರಾವು ಸಮಾಧಾನ ಪಡಿಸಿದನು. ಹೀಗೆ ವಾರ್ತಾಪತ್ರಿಕೆಗಳನ್ನು ಓದುವದರಲ್ಲಿಯೂ, ಶ್ರೀ ಪರಮೇಶ್ವರೀ ವಿಲಾಸ ಪುಸ್ತಕ ಭಾಂಡಾಗಾರದಲ್ಲಿಯ ಗ್ರಂಥಗಳನ್ನು ಪಠಿಸುವದರಲ್ಲಿಯೂ ಒಂದು ತಿಂಗಳು ಕಳೆಯಿತು.

ಶಾಮಲರಾವಿನ ಹೆಂಡತಿ ರತ್ನಾಂಬೆಯು ಮೈನೆರೆದಳು. ಶ್ಯಾಮಲರಾವಿನ ತಾಯಿತಂದೆಗಳು ನಿಷೇಕ ಮುಹೂರ್ತವನ್ನು ಮಾಡಲು ಇಚ್ಛಿಸಿದರು. ನೀರಿನ ದಿನ ಬೆಳಿಗ್ಗೆ ಶಾರದೆಯು ಮಗನೊಂದಿಗೆ ಬಂದರು. ಶೋಭನವಾಯಿತು.

....

ಕೆಲವು ದಿವಸಗಳಿಗೆ ನಾರಾಯಣರಾಯರು ಪಶ್ಚಿಮ ದೇಶಕ್ಕೆ ತೆರಳಬೇಕಾಗಿ ಬಂದಿತು. ಸಂಸಾರಕ್ಕೆ ಬಂದ ತಿಂಗಳಲ್ಲಿಯೇ, ತಾನು ಮದ್ರಾಸಿಗೆ ಪುನಃ ಓದಲು ಹೋಗುವುದಾಗಿ ಶ್ಯಾಮಲರಾವು ತಿಳಿಸಲು, ರಾಮನಾಥರಾವು ಅದಕ್ಕೆ ಅಂಗೀಕರಿಸಲಿಲ್ಲ. ಕೊನೆಗೆ ಮಗನ ಬಲವಂತದಿಂದ ಒಪ್ಪಿಕೊಳ್ಳಬೇಕಾಯಿತು.

ಶ್ಯಾಮಲರಾವು ಮೂರನೆಯ ದಿನವೇ ಮದರಾಸಿಗೆ ಪ್ರಯಾಣ ಮಾಡಲು ನಿಶ್ಚಯಿಸಿದನು. ಶಾರದೆಯು ಕೂಡ ಲಕ್ಷ್ಮೀಪುರಕ್ಕೆ ಹೊರಡಲು ಸಿದ್ಧಳಾದಳು. ಮೂರನೆಯ ದಿನ ಬೆಳಿಗ್ಗೆಯೇ ಊಟಮಾಡಿ ಶ್ಯಾಮಲರಾವು ಹೆಂಡತಿಗೆ ಬುದ್ಧಿಹೇಳಿ ಶಾರದೆಯೊಂದಿಗೆ ಗಾಡಿಯನ್ನು ಹತ್ತಿದನು. ರತ್ನಾಂಬೆಯೂ ಮಹಾಲಕ್ಷ್ಮಮ್ಮನೂ ಕಣ್ಣಿನಲ್ಲಿ ನೀರು ತಂದುಕೊಂಡರು. ಗಾಡಿಯು ಸ್ಟೇಷನ್ನನ್ನು ತಲಪಿತು. ಮೈಲು ರೈಲು ಸುಮಾರು 10 ಗಂಟೆಗೆ ಬಂತು. ಇಬ್ಬರೂ ರೈಲಿನಲ್ಲಿ ಕೂತರು.

[ಸಶೇಷ

ವಾರ್ತಾತರಂಗ

ಈ ತಿಂಗಳು 21 ರಲ್ಲಿ ದೆಹಲಿಯಲ್ಲಿ ಸಂಸ್ಥಾನಾಧೀಶರ ಸಮಾವೇಶವು ನಡೆಯುವದು. ಆಲ ಜಾಯಿಂಟ್ ಕಮಿಟಿ ರಿಪೋರ್ಟನ್ನು ಕುರಿತು ಯೋಚಿಸುವರು.

ಗೋಶಾಲೆಗಳಿಗೂ ಪಿಂಜ್ರಾಪೋಲುಗಳಿಗೂ ವ್ಯಯವಾಗುವ ಹಣವು ವೃಥಾ ಯೆಂದು ಡಾ | ಸರಾಂಜಪೆಯವರು ಮಾಡಿದ ಉಪನ್ಯಾಸವನ್ನು ಎಲ್ಲರೂ ಓದುವದು ಒಳ್ಳೇದು. ವ್ಯಾಧಿಯಿಂದ ಕೂಡಿದ ಪಶುಗಳನ್ನು ಒಂದೆಡೆ ಇಟ್ಟು ಕಾಪಾಡುವದರಲ್ಲಿ ಲಾಭವಿಲ್ಲವೆಂದು ಇವರು ಹೇಳುವರು. ಮನುಷ್ಯರನ್ನು ಕೊಂದು ಬಡ್ಡಿಯನ್ನು ಎಳೆಯುವ ವರ್ತಕರು ಗೋಶಾಲೆಗಳನ್ನಿಡುವದು ಆಶ್ಚರ್ಯವೆಂದು ತಿಳಿಸಿರುವರು.

ಮನುಷ್ಯರಿಗೂ ಮೃಗಗಳಿಗೂ ಆಯಾಸವಾಗುವಂತೆ ಲೋಹಗಳಿಗೂ ಕೂಡ ಆಯಾಸವಾಗುವದೆಂದು ಸರ್ ಜೋಸರವರು ಕಂಡುಹಿಡಿದಿರುವರು.

ಪಂಜಾಬು ಯೂನಿವರ್ಸಿಟಿಯಲ್ಲಿ ಒಬ್ಬ ಅಗಸನು ಎರಡು ವರ್ಷಗಳ ಹಿಂದೆ ಎಂ. ಎ. ಪರೀಕ್ಷೆಯಲ್ಲಿ ಉತ್ತೀರ್ಣನಾದನು. ಇದುವರಿಗೂ ಆತನಿಗೆ ಯಾವ ಉದ್ಯೋಗವೂ ದೊರೆಯಲಿಲ್ಲ. ಆದುದರಿಂದ ತನ್ನ ಸ್ವವೃತ್ತಿಯನೇ ಅವಲಬಿಸಿರುತ್ತಾನೆಂದು ತಿಳಿಯಬಂದಿದೆ.

ಇಂಡಿಯಾದೇಶವು ಪೂರ್ವದಲ್ಲಿ ಹಡಗು ವ್ಯಾಪಾರದಲ್ಲಿ ಪ್ರಸಿದ್ಧಿಯನ್ನೈದಿತು. ಆಗಿನ ಕಾಲದಲ್ಲಿ ಅನೇಕ ಹಿಂದೂ ವರ್ತಕರು ಸಮುದ್ರದ ಮಧ್ಯದ ದ್ವೀಪಗಳಲ್ಲಿ ಅನೇಕಗಳಲ್ಲಿ ವಾಸಸ್ಥಳಗಳನ್ನು ಏರ್ಪಡಿಸಿಕೊಂಡಿದ್ದರು. ಯಾವಾಗ ಹಡಗಿನ ವ್ಯಾಪಾರವೂ, ಸಮುದ್ರಯಾನವೂ ಕಡಮೆಯಾಗುತ್ತಾ ಬಂದಿತೋ, ಆಗ ಅಲ್ಲಿದ್ದ ಹಿಂದೂಗಳು ಇಲ್ಲಿಯವರಿಂದ ದೂರವಾಗುತ್ತಾ ಬಂದು ಕ್ರಮೇಣ ಮತಾಂತರವನ್ನು ಹೊಂದಿದರು. ಹಿಂದೂಗಳ ಸಂಖ್ಯೆಯು ಹಿಂದಿನ ಶತಮಾನಗಳಿಗೂ ಇಂದಿಗೂ ಬಹಳ ವೆತ್ಯಾಸವಾಗಿರಲ್ಕು ಇವೇ ಮುಖ್ಯ ಕಾರಣವು.

ದೆಹಲಿ ರೈಲು ಸ್ಟೇಷನ್ನಿನಲ್ಲಿ ಟಿಕೆಟ್ಟುಗಳಿಲ್ಲದೆ ಪ್ರಯಾಣವನ್ನು ಮಾಡುತ್ತಿದ್ದವರಲ್ಲಿ ಕೆಲವರನ್ನು ಹಿಡಿಯಲು ಅವರಲ್ಲಿ ಕಳ್ಳತನ ಮಾಡಿದ್ದ 10 ಸಾರಾಯಿ ಸೀಸೆಗಳು ಕಂಡುಬಂದಿವು.

ಅಸ್ಸಾಮು ಕೂಡ ಇಂಡಿಯಾದಿಂದ ಪ್ರತ್ಯೇಕವಾಗಬೇಕೆಂದು ಕೆಲವರು ಇಂಡಿಯಾ ಸ್ಟೇಡ್ ಸೆಕ್ರೆಟರಿಗೆ ಮಹಜರೊಂದನ್ನು ಕಳುಹಿಸಿರುವರು.

ಫ್ರಾನ್ಸಿನ ನೌಕಾ ಪ್ರಮಾದದಲ್ಲಿ 21 ಮಂದಿ ಮರಣಹೊಂದಿದರು. ಹಡಗು ಇದ್ದ ಸ್ಥಳವು ಕೂಡಾ ತಿಳಿಯಲಿಲ್ಲ.

ಹೊಟ್ಟೆಯಲ್ಲಿ ಯಾವ ವ್ರಣವು ಜನಿಸಿದರೂ ಕೂಡಲೇ ಕಂಡುಹಿಡಿಯಟು ಯೂರೋಪಿನ ಡಾಕ್ಟರುಗಳು ಕಂಡುಹಿಡಿದಿರುವರು.

400 ನೋಟಾರು ಕಾರುಗಳನ್ನು ಇರಿಸಲು 5 ಅಂತಸ್ತಿನ ಮಹಡಿಯೊಂದನ್ನು ಲಂಡನ್ನಿನಲ್ಲಿ ಈಚೆಗೆ ನಿರ್ಮಾಣ ಮಾಡಿರುವರು.

ಬರುವ ಮೇ 6 ನೇ ತಾರೀಖಿನ ದಿವಸ ಶ್ರೀ ಸಾರ್ವಭೌಮರ ಜೂಬಿಲಿ ಮಹೋತ್ಸವವನ್ನು ನಡೆಸಬೇಕೆಂದೂ, ಸಾರ್ವಭೌಮರು ವಿವಿಧ ದೇಶಗಳಿಂದ ರಾಯಭಾರಿಗಳನ್ನೂ, ಸಾಮ್ರಾಜ್ಯ ಸ್ವದೇಶ ಪ್ರತಿನಿಧಿಗಳನ್ನೂ ಕಲೆತು ಮಾತನಾಡುವರೆಂದೂ, ಎರಡು ಪಾರ್ಲಿಮೆಂಟು ಸಭೆಗಳಿಂದಲೂ ಅಭಿನಂದನ ಪತ್ರಗಳನ್ನು ಸ್ವೀಕರಿಸುವರೆಂದೂ, ಪಾರ್ಲಿಮೆಂಟು ಸಭೆಯಲ್ಲಿ ಪ್ರಧಾನ ಮಂತ್ರಿಗಳು ತಿಳಿಸಿರುವರು.

ಇಟಲಿಯಲ್ಲಿ ಮಕ್ಕಳಿಲ್ಲದ ಸ್ತ್ರೀಯೆರಿಗೆ ಗರ್ಭೋತ್ಪತ್ತಿಯಾಗಲು ಇಟಲಿ ಡಿಕ್ಟೇಟರು ಮುಸ್ಸೋಲಿನಿಯವರು ಎರಡು ಆಸ್ಪತ್ರೆಗಳನ್ನು ನಿರ್ಮಾಣಮಾಡಿ, ಬಂಜೆಯರು ಇಟಲಿದೇಶದಲ್ಲಿ ಇಲ್ಲದಂತೆ ಮಾಡುವರಂತೆ !

ತಕ್ಷವಾಡಾ ಪೋಲೀಸಿನವರು ರಂಗೂನಿನಲ್ಲಿ ಒಂದು ಬೌದ್ಧ ದೇವಾಲಯವನ್ನು ಶೋಧನೆ ಮಾಡುವಾಗ, ಬುದ್ಧ ವಿಗ್ರಹದ ಕೆಳಗಡೆ ಬಚ್ಚಿಟ್ಟಿದ್ದ ಎರಡು ಬಂದೂಕಗಳು ದೊರೆತವು. ಆ ಮಠದ ಸನ್ಯಾಸಿಯನ್ನು ದಸ್ತಗಿರಿ ಮಾಡಿರುವರು.

ವರ್ತಮಾನಗಳು

ಯಾವ ಶಬ್ದವನ್ನೂ ಮಾಡದೆ ಒರದು ಕ್ಷಣದಲ್ಲಿ ಶತ್ರುಗಳ ಹಡಗುಗಳನ್ನು ಮುಳುಗಿಸುವ ಜಲಾಂತರ್ಯಾಮಿನಿಯನ್ನು ಇಟಲಿಯಲ್ಲಿ ಒಬ್ಬ ಶಾಸ್ತ್ರಜ್ಞನು ಕಂಡುಹಿಡಿದಿರುವನು. ಈ ಯಂತ್ರವು, ಹಡಗನ್ನು ಸಮೀಪಿಸಿ ಆದರಲ್ಲಿ ರಂಧ್ರವನ್ನು ಮಾಡುವಿಕೆಯನ್ನು ತಿಳಿದುಕೊಳ್ಳುವುದು ಕಷ್ಟವಂತೆ.

ಬೌದ್ಧ ಸಂಸ್ಥಾನಾಧೀಶರು ತಮ್ಮ ದೇಶದ ರೈತರಿಂದ ಕಂದಾಯದ ಸ್ವಲ್ಪ ಭಾಗವನ್ನು ನೂಲಿನ ರೂಪದಲ್ಲಿ ತೆಗೆದುಕೊಳ್ಳುತ್ತಲಿರುವರು. ಈ ಮೂದರಿಯ ಸೌಲಭ್ಯವನ್ನು ನಮ್ಮ ಸರ್ಕಾರದವರೂ ಕೊಟ್ಟಲ್ಲಿ ಚರಕದಿಂದ ನೂಲನ್ನು ತೆಗೆಯುವ ವಿಷಯದಲ್ಲಿ ಜನಗಳಿಗೆ ಪ್ರೋತ್ಸಾಹವನ್ನು ಕೊಟ್ಟಂತಾಗುವದು ; ಮತ್ತು ಬದನವಾಳು ಮೊದಲಾದ ಖಾದಿ ಕ್ಷೇತ್ರಗಳಿಗೆ ಸಾಕಾಗುವಷ್ಟು ನೂಲು ದೊರೆವುದು.

ಗುಡಿವಾಡದ ವಾಸಿಗಳಾದ ಜೇಪರತ್ನಂ ಎಂಬ ಕ್ರೈಸ್ತ ಮಿಷನರಿಯು ಕ್ರೈಸ್ತ ಮತ ವಿಷಯವನ್ನು ಪ್ರಚಾರಮಾಡಲು ಭಾರತದೇಶದಲ್ಲಿ ಸಂಚಾರಮಾಡುತ್ತಿರುವರು. ಇವರ ಅರವೆಯು ಸೋಂಕುವದರಿಂದಲೇ ವ್ಯಾಧಿಗ್ರಸ್ಥರ ವ್ಯಾಧಿಗಳು ಗುಣವಾಗುವವಂತೆ.

ಅಲಹಾಬಾದಿನಲ್ಲಿ ಒಬ್ಬ ಕಳ್ಳನು ಅತಿಥಿಯಾಗಿ ಒಬ್ಬರ ಮನೆಗೆ ಬಂದು ರಾತ್ರಿ ಅಲ್ಲಿಯೇ ಮಲಗಿದ್ದು ಮನೆಯವರೆಲ್ಲರನ್ನೂ ಕೊಂದು ಹಣವನ್ನು ಅಪಹರಿಸಿಕೊಂಡು ಹೋದನು. ಒಬ್ಬ ಹುಡುಗಿಯು ಮಾತ್ರ ತನ್ನನ್ನು ಕೊಲ್ಲಬೇಡವೆಂದು ಬೇಡಿಕೊಳ್ಳಲು ಆ ಹುಡುಗಿಯ ಮೇಲೆ ದಯವನ್ನು ತೋರಿಸಿ ಬಿಟ್ಟನು.

ಭಾರತದೇಶದ ಕುದುರೆ ಜೂಜುಗಳನ್ನು ಏರ್ಲೆಂಡಿನಲ್ಲಿರುವಂತೆ ಏರ್ಪಾಡು ಮಾಡಬೇಕೆಂದು ಮುಂಬೈಯಲ್ಲಿ ಸಂಕಲ್ಪಿಸಿರುವಂತೆ ತಿಳಿಯಬಂದಿದೆ.

ಜಾರ್ಜ್ ಚಕ್ರವರ್ತಿಗಳು ದಿನಂಪ್ರತಿ ಸರಾಸರಿ 300 ಕಾಗದಗಳಿಗೆ ಸೈನ್ ಮಾಡುವರೆಂದು ತಿಳಿಯಬಂದಿದೆ

ಒಬ್ಬ ಸ್ವೀಡನ್ನಿನ ಹುಡುಗಿಗೆ 20 ವರ್ಷ ವಯಸ್ಸು. ಆದರೆ ಕಳ್ಳತನದಲ್ಲಿ ನಿಸ್ಸೀಮಳು. 2 ವರ್ಷಗಳಲ್ಲಿ 800 ಅಂಗಡಿಗಳಲ್ಲಿ ಕಳ್ಳತನವನ್ನು ಮಾಡಿರುವಳು.

ಧಾತು ಸಂವತ್ಸರದ ವೀರಕ್ಷಾಮವು 1876 ರಲ್ಲಿ ಶುರುವಾದದ್ದು. ಅಂದಿನಿಂದ 60 ವರ್ಷಗಳು 1936 ಕ್ಕೆ ಆಗುತ್ತದೆ. ಈಗಲೂ ಪುನಃ ಆ ಬಗೆಯ ಕ್ಷಾಮವು ಬರುವದೋ ಏನೋ ಎಂದು ಅನೇಕರು ಗಾಬರಿಗೊಳ್ಳುತ್ತಿರುವರು.

ಊಟಿಯಲ್ಲಿ ಚಳಿ ಬಾಧೆಯಿಂದ ಅನೇಕರು ತೊಂದರೆ ಪಡುತ್ತಿರುವರು. ಕಳೆದ 30 ವರ್ಷಗಳಿಂದ ಇಷ್ಟು ಚಳಿಯು ಎಂದೂ ಇದ್ದಿಲ್ಲವಂತೆ.

ಅಮೇರಿಕಾದಲ್ಲಿ ಪೆನ್ಸಿಲ್ವೇನಿಯಂ ರೈಲ್ವೆ ಕಂಪೆನಿಯವರು ವಿದ್ಯುಚ್ಛಕ್ತಿಯ ಸಹಾಯದಿಂದ ರೈಲನ್ನು 90 ಮೈಲಿಗಳ ವೇಗದಲ್ಲಿ ನಡೆಸಲು ಸಿದ್ಧಪಡಿಸಿರುವರು.

ರೋಮ್ ಕಾಥಾಲಿಕ್ ನಾಗಿದ್ದ ಒಬ್ಬ ಜರ್ಮನ್ ದೇಶೀಯನು ಬೌದ್ಧಮತವನ್ನು ಸ್ವೀಕರಿಸಲು ಕೊಲಂಬೋವಿಗೆ ಬಂದಿರುವನು.

ಭಾರತೀಯರಲ್ಲಿ ವಿಭೇಧಗಳಿರುವದರಿಂದಲೇ ಬ್ರಿಟಿಷರು ಇಲ್ಲಿ ರಾಜ್ಯವಾಳಲು ಅನುಕೂಲವಾಯಿತೆಂದು ಟಾರ್ ಗಫ್ಸೊರ್ ರವರು ಉಪನ್ಯಾಸಮಾಡಿದ್ದಕ್ಕಾಗಿ ಅವರಿಗೆ ಶಿಕ್ಷೆಯಾಗಿರುತ್ತದೆ.

ಅಮೇರಿಕಾ ವಿಮಾನಗಳ ವೇಗವು ಗಂಟೆಗೆ 200 ಮೈಲಿಗಳು.

ಒಬ್ಬ ಸ್ತ್ರೀಯನ್ನು ಬಲಾತ್ಕಾರದಿಂದ ಎತ್ತಿಕೊಂಡುಹೋದದ್ದಕ್ಕಾಗಿ ಒಬ್ಬ ಜಮೀನ್ದಾರನಿಗೆ 10 ವರ್ಷಗಳ ಕಠಿಣ ಶಿಕ್ಷೆಯೂ, ಈತನ ನೌಕರನಿಗೆ 8 ವರ್ಷ ಶಿಕ್ಷೆಯೂ ವಿಧಿಸಲ್ಪಟ್ಟಿರುವದು.

ಒಂದು ದೇವತೆಯು ಒಬ್ಬ ಕುರುಡನಿಗೆ ಪೂರಿ ಸಮೀಪದಲ್ಲಿಯ ಒಂದು ಕಾಡಿನಲ್ಲಿ ತುಪಾಕಿಗಳೂ, ಆಯುಧಗಳೂ ಇರುವನೆಂದು ರಾತ್ರಿಯಲ್ಲಿ ಕನಸಿನಲ್ಲಿ ತಿಳಿಸಿದನಂತರ, ಈ ವಿಷಯವನ್ನು ಜಿಲ್ಲಾ ಮ್ಯಾಜಿಸ್ಟ್ರೇಡರಿಗೆ ತಿಳಿಸಿ, ಪರೀಕ್ಷಿಸಲು, ಅವುಗಳು ಹಾಗೆಯೇ ಕಂಡುಬಂದವು.

THE

Weekly Newspaper

SATYAVADI

Every Wednessday

MYSORE (Founded 1917) 2—1—35

ವಿವಿಧ ವಿಷಯಗಳು

ಭಾರತದೇಶದಲ್ಲಿ ಚಾಲ್ತಿಯಲ್ಲಿರತಕ್ಕ ಇಂಗ್ಲೀಷು ವಿದ್ಯಾಭ್ಯಾಸ ಮಾಡಿದ ಅನೇಕರಿಗೆ ಕೆಲಸ ದೊರೆಯದೇ ಜೀವನಕ್ಕೆ ಪೇಚಾಟವಾಗಿರುತ್ತದೆ. ಇವರ ಸಂಖ್ಯೆಯು ಎಲ್ಲೆಲ್ಲಿಯೂ ಹೆಚ್ಚಾಗುತ್ತಾ ಬರುತ್ತಲಿದೆ. ಈ ವಿಚಾರದಲ್ಲಿ ಸರ್ವರೂ ಗಮನವಿಡಬೇಕಾದದ್ದು ಅತ್ಯವಶ್ಯಕ. ಬ್ರಿಟಿಷ್ ಪ್ರಭುತ್ವವಾರಂಭಿಸಿದಂದಿನಿಂದ ಸರ್ಕಾರದ ಉದ್ಯೋಗ ಸಂಪಾದನೆಗೆ ಇಂಗ್ಲೀಷು ಮುಖ್ಯವಾದದ್ದೆಂದು ಭಾವಿಸಿ ಇಂಗ್ಲೀಷು ಕಲಿಯುವದರಲ್ಲಿ ಶ್ರದ್ಧಾಳುಗಳಾಗಿರುತ್ತಾರೆ. ಈ ವಿದ್ಯೆಯನ್ನು ಕಲಿಯುವದರಿಂದ ನಮ್ಮ ದೇಶಾಭಿವೃದ್ಧಿಗೆ ಅಂತರಾಯ ಉಂಟಾಗಿ, ಇದನ್ನು ಕಲಿತವರು ಇತರ ವೃತ್ತಿಗಳಲ್ಲಿ ಕೆಲಸಕ್ಕೆ ಬಾರದವರಾಗತಕ್ಕ ಸ್ಥಿತಿಯು ಸಂಭವಿಸಿರುತ್ತದೆ. ವಿದ್ಯಾರ್ಥಿಗಳನೇಕರು ಇತರ ಸಾಂಕೇತಿಕ ವಿದ್ಯೆಗಳನ್ನು ಕಲಿತಲ್ಲಿ ನಿರುದ್ಯೋಗ ಸಂಖ್ಯೆಯು ತಗ್ಗುತ್ತದೆಯೆಂದು ಕೆಲವರು ಅಭಿಪ್ರಾಯ ಪಡುತ್ತಲಿದಾರೆ. ಇದಕ್ಕೆ ಸಹಾಯವು ಅವಶ್ಯವಾಗಿ ಬೇಕೇಬೇಕು. ಬ್ರಿಟಿಷ್ ಪ್ರಭುತ್ವದವರಿಗೆ ಸ್ವಾರ್ಥ ದೃಷ್ಟಿಯೇ ವಿಶೇಷವಾಗಿರುವದರಿಂದ ರಾಜಕೀಯ ವ್ಯವಹಾರವೊಂದರಲ್ಲಿ ಮಗ್ನರಾಗುತ್ತಿರುವದರ ಜೊತೆಯಲ್ಲಿ ಇತರ ವಿದ್ಯೆಗಳನ್ನು ಕೂಡಿದ ಮಟ್ಟಿಗೆ ಅಭ್ಯಾಸಕ್ಕೆ ತಂದುಕೊಳ್ಳುವದು ಮೇಲಾಗಿ ಕಾಣುತ್ತವೆ. ಅನೇಕ ಸಂದರ್ಭಗಳಲ್ಲಿ ಉಂಟಾಗುತ್ತಿರುವ ಅನರ್ಥಗಳನ್ನು ಈ ಮೂಲಕ ಪರಿಹರಿಸಿಕೊಳ್ಳುವದು ಶ್ರೇಯಸ್ಕರವು. ಅನುಭವಸ್ಥರಾದ ಡಾ| ಪರಾಂಜಪೆಯವರು ಭಾರತದೇಶದ ವಿದ್ಯಾವಿಧಾನವು ಕೂಡಲೇ ಸಂಪೂರ್ಣವಾಗಿ ಬದುಲಾದ ಹೊರತು ದೇಶವು ಅಭಿವೃದ್ಧಿಗೆ ಬರಲಾರದೆಂದು ಅಭಿಪ್ರಾಯ ಪಟ್ಟಿರುತ್ತಾರೆ.

ಇಂಡಿಯಾದಲ್ಲಿ ಮತ ಜಾತಿಯ ವೈಷಮ್ಯಗಳು ಹೆಚ್ಚಾಗಿರುವದರಿಂದ ಭಾರತೀಯರಿಗೆ ಅಧಿಕಾರಗಳನ್ನು ಕೊಟ್ಟಲ್ಲಿ ವಿಪರೀತ ಪರಿಸ್ಥಿತಿಗಳೇರ್ಪಡುತ್ತವೆ, ಎಂದು ಲಂಡನ್ ಲಾರ್ಡ್ ಸಭೆಯಲ್ಲಿ ಲಾರ್ಡ್ ಸ್ಟ್ರಿಕ್ಲೆಂಡರವರು ಹೇಳಿರುತ್ತಾರೆ.

ಇಂಗ್ಲೆಂಡಿನಲ್ಲಿ ಪೀಟರ್ ವಾರ್ಲಿಕ್ ಎಂಬುವನು ಎಷ್ಟು ಪ್ರಯತ್ನಗಳನ್ನು ಮಾಡಿದರೂ ತನಗೆ ನಷ್ಟ ಸಂಭವಿಸಿದ್ದಿತೆಂದೂ, ತಾನು ಗಡ್ಡವನ್ನು ಬೋಳಿಸದೇ ಬಿಟ್ಟನೇಲೆ ತನಗೆ ಲಾಭವಿರುವದಕ್ಕೆ ಪ್ರಾರಂಭವಾಯಿತೆಂದೂ ಪ್ರಕಟಿಸಿರುತ್ತಾನೆ.

ಆಕ್ಸ್‌ಫರ್ಡ್‌ನಲ್ಲಿ ಪ್ರತಿ ವರ್ಷವೂ ನಡೆಯತಕ್ಕ ಹಿಟ್ಲರ್ ಉಪನ್ಯಾಸಗಳಲ್ಲಿ, ಈ ವರ್ಷ ಡಾ || ಆಲ್ಬರ್ಟ್ ಸ್ಕ್ವಿಟ್ಸರ್‌ರವರು, ಅಹಿಂಸಾ ಪದ್ಧತಿಯನ್ನು ಕೊಂಡಾಡತಕ್ಕ ಉಪನ್ಯಾಸಗಳನ್ನು ನಡೆಸಿರುತ್ತಾರೆ.

ಇಂಗ್ಲೆಂಡಿನಲ್ಲಿ ಸ್ತ್ರೀಯರು ಗಾಜಿನ ಉಡುಪನ್ನು ಧರಿಸಲಾರಂಭಿಸಿರುವರು.

ರೈಲ್ವೇ ಗೇಟುಗಳಿಂದ ರೋಡಿನಲ್ಲಿ ಗಾಡಿಗಳೂ ಮೋಟಾರುಗಳೂ ಹೋಗಲು ಅನಾನುಕೂಲವಾಗುವದಷ್ಟೆ. ರೈಲು ಬಂದಾಗ ತನ್ನಷ್ಟಕ್ಕೆ ತಾನೇ ಮೇಲಕ್ಕೆ ಏಳುವ ರೈಲ್ವೇ ಗೇಟುಗಳನ್ನು ಇಂಗ್ಲೆಂಡಿನಲ್ಲಿ ನಿರ್ಮಾಣ ಮಾಡಲು ಆರಂಭಿಸಿರುವರು.

ಆಪರೇಷನ್ನುಗಳಲ್ಲಿ ರಕ್ತಸ್ರಾವವನ್ನು ನಿಲ್ಲಿಸಲು ಹಾವಿನ ವಿಷವು ಉಪಯೋಗವಾಗುವದೆಂದು ಲಂಡನ್ನಿನ ಡಾಕ್ಟರುಗಳು ಕಂಡುಹಿಡಿದಿರುವರು.

ಹುಟ್ಟು ಕುಡುಡರಾದ ಇಬ್ಬರು ವಿದ್ಯಾರ್ಥಿಗಳು ಬಾರೀವ್ರಡ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿ, ಎಲ್ಲಾ ಪರೀಕ್ಷೆಗಳಲ್ಲಿಯೂ ಅತ್ಯುನ್ನತ ಸ್ಥಾನವನ್ನು ಹೊಂದಿ ಈಗ ವರ್ಷಕ್ಕೆ 70 ಪೌಂಡುಗಳ ಸ್ಕಾಲರ್ಷಿಪ್ಪನ್ನು ಪಡೆದು ಉನ್ನತ ವಿದ್ಯೆಯನ್ನು ಕಲಿಯುತ್ತಿದಾರೆ.

ಪೂರ್ಣ ಬಲಶಾಲಿಗಳಾಗಿಯೂ ಆರೋಗ್ಯವಂತರಾಗಿಯೂ ಇರುವುದಕ್ಕೆ ನನ್ನ ಸೇವಿಸಿ.

ಗಣಪತಿ



ಡಾಕ್ಟರ್ ಜಿ. ಬಿ. ಯವರ

ಸುಗಂಧನಸ್ಯದಪುಡಿ?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಭಗಾರರೆ? ಅಥವಾ ಚದುರಂಗಆಡುವವರೇ? ನೀವು ಯಾರಾದರೂ ಸರಿ. ನಿಮಗೆ ಬೇಸರಿಕೆಯುಂಟಾಗಿ ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾ| ಜೆ. ಬಿ ಯವರ ಸುಗಂಧನಸ್ಯದಪುಡಿಯನ್ನು ಉಪಯೋಗಿಸಿ.ಆಗ ನಿಮ್ಮಲ್ಲಿ ನವಚೇತನ ಉಂಟಾಗಿ ಉತ್ಸಾಹವೂ ಸ್ಫೂರ್ತಿಯೂತೋರಿಬರುವುದು. ಬೆಲೆ ಬುಡ್ಡಿಗೆ ನಾಲ್ಕಾಣೆ. (ಟಪಾಲು ಪ್ರತ್ಯೇಕ.)

ಗುರುಬಸವ ಎಂಡ್ ಕಂಪೆನಿ, ಲಿಮಿಟೆಡ್,

ಪೋಸ್ಟ್‌ಬಾಕ್ಸ್ ನಂಬರ್ ೧೦೫, ಪಾರ್ಕ್‌ಟೌನ್, ಮದ್ರಾಸು

H. S. KAMAL SHERIFF
DENTIST
Lansdowne Buildings, Mysore.

We prepare artificial teeth with which any hard substance can be chewed. We Extract even the strongest teeth with the greatest ease. Stuffing the hollow tooth with gold and silver a speciality. Every work is done to the entire satisfaction.

ಹುಬ್ಬಳ್ಳಿಯಲ್ಲಿ ಪ್ರತಿ ಸೋಮವಾರ ಪ್ರಕಟವಾಗುವ

ದೇಶಬಂಧು

ಪತ್ರಿಕೆಯನ್ನು ಓದಿ ಆನಂದಪಡಿರಿ.

ವಿವಿಧ ವರ್ತಮಾನಗಳ ಭಂಡಾರವಿದು. ತಾತ್ಕಾಲಿಕ ಉಯುಕ್ತ ವಿಷಯಗಳ ಗಣಿಯಿದು. ವಿನೋದಪಲಾಸಗಳ ಬುಗ್ಗೆಯಿದು. ವಾರ್ಷಿಕ ಚಂದಾರೂ ೩-೮-೦

ವಿಳಾಸ—ಸಂಪಾದಕ ದೇಶಬಂಧು
ಹುಬ್ಬಳ್ಳಿ

ಅರುಣೋದಯ

ಜನಸದ ಹಿತವನ್ನು ಸಾಧಿಸುವ ಪ್ರಮುಖ ರಾಷ್ಟ್ರೀವಾರ ಪತ್ರಿಕೆ

ಇದು ಸುಪ್ರಸಿದ್ಧ ವಿದ್ವಾಂಸರ ವಿವಿಧ ವಿಷಯಗಳಅಮೌಲ್ಯ ಲೇಖನಗಳಿಂದಲೂ, ರಸಭರಿತವಾದ ಕವಿತೆ ಮತ್ತು ಕಥೆಗಳಿಂದಲೂ, ಮತ್ತು ಪ್ರಪಂಚದಲ್ಲಿ ನಡೆಯುತ್ತಿರುವ ಮಹತ್ವದ ಸಂಗತಿಗಳಿಂದಲೂ ಕೂಡಿದುದಾಗಿದೆ. ಇಡೀ ಕರ್ನಾಟಕದಲ್ಲೆಲ್ಲಾ ಇದರ ಪ್ರಚಾರವಿರುವುದು. ವಾರ್ಷಿಕ ಚಂದಾ ರೂ 2-8-0

ವಿ. ಪಿ. ರೂ 2-12-0 ಮ್ಯಾನೇಜರ್, "ಅರುಣೋದಯ", ಬೆಳಗಾಂ